ಶಾಲೆಗಳು ಎಸ್‌ಸಿ/ಎಸ್‌ಟಿ ಜನಾಂಗದವರಿಗೆ ಸೇರಿವೆ. ಅವರಿಗೂ ಇದೇ ರೀತಿ ಏನಾದರೂ ಮಾಡುವುದಾದರೆ ಬಹಳ ತೊಂದರೆಯಾಗುತ್ತದೆ. ಈಗಾಗಲೇ ಶಾಲೆಗಳಿಗೆ ಮೇಸ್ಟ್ರುಗಳನ್ನು ಅಪಾಯಿಂಟ್‌ಮೆಂಟ್ ಮಾಡಿದ್ದಾರೆ. 30-40-50 ಸಾವಿರ ರೂಪಾಯಿಗಳ ಡೊನೇಷನ್ ತಗೆದುಕೊಂಡು ಮೇಸ್ಟ್ರುಗಳನ್ನು ಅಪಾಯಿಂಟ್ ಮಾಡಿದ್ದಾರೆ. ಅವರ ಗತಿ ಏನು? ಹಿಂದೆ ಆಗಿರತಕ್ಕಂಥ ಶಾಲೆಗಳು ನಿಮ್ಮ ಕಾನೂನಿಗೆ ಒಳಪಟ್ಟಿವೆ ಮತ್ತು ಅರ್ಹತೆಗಳು ಇವೆಯೆಂದು ಕಂಡು ಬಂದಲ್ಲಿ ಅವುಗಳಿಗೆ ಮಾನ್ಯತೆ ಕೊಡುವುದು ಉತ್ತಮವೆಂದು ನನ್ನ ಸಲಹೆ.

ಡಾ॥ ಹೆಗ್ಗಪ್ಪ ಡಿ. ಲಮಾಣಿ : ಸನ್ಮಾನ್ಯ ಅಧ್ಯಕ್ಷರೆ, ಮೇ ತಿಂಗಳಿನಲ್ಲಿ ಇದರ ಬಗ್ಗೆ ಸುಗ್ರೀವಾಜ್ಞೆ ಆಗಿದ್ದು ಈ ಸುಗ್ರೀವಾಜ್ಞೆಯನ್ನು ನೋಡಿದ ಮೇಲೆ, ಅನ್‌ರೆಕಗ್‌ನೈಸ್ಡ್ ಸ್ಕೂಲ್‌ನವರು ತಮ್ಮ ಶಾಲೆಗಳಿಗೆ ವಿದ್ಯಾರ್ಥಿಗಳನ್ನು ಭರ್ತಿ ಮಾಡಿಕೊಳ್ಳಬಾರದಾಗಿತ್ತು. ನಾವು ಸಂಸ್ಥೆಯ ದೃಷ್ಟಿಯಿಂದ ನೋಡುತ್ತಿಲ್ಲ. ವಿದ್ಯಾರ್ಥಿಗಳ ದೃಷ್ಟಿಯಿಂದ ಮಾತ್ರ ನಾವು ನೋಡುತ್ತಿರುವುದು , ಕಾನೂನು ಪ್ರಕಾರ ಅವುಗಳಿದ್ದರೆ ರೆಗ್ಯುಲರೈಸ್ ಮಾಡುತ್ತೇವೆ. ಇಲ್ಲವೆಂದರೆ ಅವುಗಳನ್ನು ಬಂದ್ ಮಾಡುತ್ತೇವೆ.

ಶ್ರೀ ಕೆ.ವಿ. ರವೀಂದ್ರನಾಥ ಬಾಬು : ಇವೊತ್ತು ಅನೇಕ ಅನ್‌ಏಡೆಡ್ ಸ್ಕೂಲ್ಸ್ ಇವೆ. ಒಬ್ಬೊಬ್ಬ ಟೀಚರ್‌ನಿಂದ 50-60 ಸಾವಿರ ಹಣ ತೆಗೆದುಕೊಂಡು ಸರ್ಕಾರದಿಂದ ಗ್ರ್ಯಾಂಟ್ ಬಂದ ಮೇಲೆ ನಿಮಗೆ ಸಂಬಳ ಕೊಡುತ್ತೇವೆಂದು ಹೇಳಿ, ಅವರು ಸ್ಕೂಲ್‌ಗಳನ್ನು ನಡೆಸುತ್ತಿದ್ದಾರೆ. ಅದೂ ಅಲ್ಲದೆ ಅಂಥಾ ಸ್ಕೂಲ್‌ಗಳಲ್ಲಿ ಬೆಂಚುಗಳು ಇರುವುದಿಲ್ಲ, ಛೇರ್ಸ್ ಇರುವುದಿಲ್ಲ, ಕ್ಲಾಸ್ ರೂಮ್ಸ್ ಇರುವುದಿಲ್ಲ. ಇದರ ಬಗ್ಗೆ ತಾವು ಏನಾದರೂ ಪರಿಶೀಲನೆ ಮಾಡಿದ್ದೀರಾ? ಇಂಥ ಇನ್ಸಿಟ್ಯೂಷನ್ ಮೇಲೆ ಆ್ಯಕ್ಷನ್ ತೆಗೆದುಕೊಳ್ಳುತ್ತೀರಾ? ಒಬ್ಬೊಬ್ಬ ಲೆಕ್ಚರರ್ ಮತ್ತು ಟೀಚರ್ 50-60 ಸಾವಿರ ಕೊಟ್ಟು ಕೆಲಸಕ್ಕೆ ಸೇರಿಕೊಂಡಿದ್ದಾರೆ, ಇದುವರೆಗೂ ಅವರು ಸಂಬಳ ಇಲ್ಲದೆ ಕೆಲಸ ಮಾಡುತ್ತಿದ್ದಾರೆ. ಇದರ ಬಗ್ಗೆ ಏನು ಮಾಡುತ್ತೀರಿ?

ಡಾ॥ ಹೆಗ್ಗಪ್ಪ ಡಿ. ಲಮಾಣಿ : ಸಂಬಳದ ಬಗ್ಗೆ ಪ್ರಶ್ನೆಯೇ ಇಲ್ಲ. ಏಕೆಂದರೆ ಅವು ಅನುದಾನ ರಹಿತ ಶಾಲೆಗಳು. ಇನ್ನು ಶಾಲೆಗಳಲ್ಲಿ ಅವ್ಯವಸ್ಥೆ ಇದ್ದು ಅಧ್ಯಾಪಕರು ಕಾನೂನು ಪ್ರಕಾರ ಇರಲಿಲ್ಲವೆಂದರೆ ಅವುಗಳ ಮೇಲೆ ನಾವು ಆಕ್ಷನ್ ತೆಗೆದುಕೊಳ್ಳುತ್ತೇವೆ ಮತ್ತು ಬಂದ್ ಮಾಡುವ ವ್ಯವಸ್ಥೆ ಮಾಡುತ್ತೇವೆ. ಆದರೆ ಅವುಗಳಿಲ್ಲವನ್ನೂ ಸಾರಾಸಗಟಾಗಿ ರೆಗ್ಯುಲರೈಸ್ ಮಾಡುವುದಕ್ಕಾಗುವುದಿಲ್ಲ.

Sub : Vacancy of Grade -II Teachers in Minority Institutions.

Strred Qu. No. : 204 (1218)
Sri. K.C. Modagekar Desai (Hegebagevadi) : Will Minister for Education be pleased to state :

a) Number of posts of Grade -II Teachers are vacant in Minority Institutions in the State

b) Out of which the number of posts have been filled up (District wise details may be given) .

c) If not, the action taken by the Government to fill up these posts immediately?

Dr. Heggappa D. lamani (Minister for Education) :

a) 346 posts are vacant.

b) NIL

c) Government have relaxed the Economy orders to fill up the death vacancies, retairement vacancies and resignation vacancies vide order No. ED 135 RCN.92 dated 21-11-92. Action is being taken to fill up these posts shortly.

Sri. K. C. Modegekar Desai : While replying to my question : the number of posts of Grade II teachers that are vacant in the minority institutions in the State, the Government has admitted that 346 posts are vacant. To the question, out of which the number of posts that have been filled up, the District- wise details may be given , the Government has informed , " NIL" . The third question, 'if not, the action taken by the Government to fill up these posts immediately' the reply is, the Government has relaxed the economy order to fill up the ' death ' vancancies, 'retairement' vacancies and 'resignation' vacancies vide order so and so , action is being taken to fill up those posts shortly. It is a temporary solution, Sir. Can I ask the Hon'ble Minister what direction he has issued to the Joint Director of Public Instruction regarding filling up of these posts in minority institutions ?

ಡಾ॥ ಹೆಗ್ಗಪ್ಪ ಡಿ. ಲಮಾಣಿ : ಸಮ್ಮಾನ್ಯ ಅಧ್ಯಕ್ಷರೆ, ಈಗಾಗಲೇ ನಾವು ಖಾಲಿ ಇರತಕ್ಕಂಥ ಅಧ್ಯಾಪಕರುಗಳ ಸ್ಥಾನವನ್ನು ತುಂಬಲಿಕ್ಕೆ ಎಲ್ಲಾ ವ್ಯವಸ್ಥೆಯನ್ನು ಮಾಡಿದ್ದೇವೆ. ಹಿಂದೆಯೂ ಸಹ ಇಂಥ ವ್ಯವಸ್ಥೆ ಮಾಡಲಾಗಿತ್ತು. ಈಗಲೂ ಸಹ ಒಂದೆರಡು ತಿಂಗಳಲ್ಲಿ ಎಲ್ಲಾ ಪೋಸ್ಟ್‌ಗಳನ್ನು ತುಂಬುವಂತಹ ವ್ಯವಸ್ಥೆ ಮಾಡುತ್ತೇವೆ. ಹೈಸ್ಕೂಲ್‌ನಲ್ಲಿ ಮತ್ತು ಮೈನಾರಿಟಿ ಸ್ಕೂಲ್‌ಗಳಲ್ಲಿ ಸುಮಾರು 1,405 ಪೋಸ್ಟ್‌ಗಳು ಖಾಲಿ ಇದೆ. ಅವನ್ನು ಇನ್ನು ಎರಡು ತಿಂಗಳಲ್ಲಿ ತುಂಬುವ ವ್ಯವಸ್ಥೆಯನ್ನು ಮಾಡುತ್ತೇವೆ.

Sri. K. C. Modegekar Desai : Speaker Sir, my question is, What direction the Government has given to fill up these posts in minorty institutions ?

ಡಾ॥ ಹೆಗ್ಗಪ್ಪ ಡಿ. ಲಮಾಣಿ : ನಾನು ಹೇಳಿದೆ ಸ್ಪೆಷಲ್ ರಿಕ್ರೂಟ್‌ಮೆಂಟ್ ನಾವು ಮಾಡುತ್ತಿದ್ದೇವೆ. ನಾವು ರೆಗ್ಯುಲರ್ ಟೀಚರ್‌ಗಳನ್ನು ತುಂಬುವುದಕ್ಕೆ ಒಂದೆರಡು ತಿಂಗಳಲ್ಲಿ ವ್ಯವಸ್ಥೆ ಮಾಡುತ್ತೇವೆ. ನಾವು ಈ ಬಡ್ಜೆಟ್ ಭಾಷಣದಲ್ಲಿ ಖಾಲಿ ಇರುವ ಪೋಸ್ಟ್‌ಗಳನ್ನು ತುಂಬುತ್ತೇವೆಂದು ಆಶ್ವಾಸನೆಯನ್ನು ಕೊಟ್ಟಿದ್ದೇವೆ.

<u>ವಿಷಯ : ಬಾದಾಮಿ, ಬಾಗಲಕೋಟೆ ಹಾಗೂ ಹುನುಗುಂದ ತಾಲ್ಲೂಕುಗಳಲ್ಲಿ ಶಿಕ್ಷಕರ ಕೊರತೆ.</u>

1204

ಶ್ರೀ ಹೆಚ್. ವೈ. ಮೇಟಿ (ಗುಳೇದಗುಡ್ಡ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಾದಾಮಿ, ಬಾಗಲಕೋಟೆ ಹಾಗೂ ಹುನುಗುಂದ ತಾಲ್ಲೂಕುಗಳಲ್ಲಿನ ಗ್ರಾಮಗಳಲ್ಲಿರುವ ಪ್ರಾಥಮಿಕ ಶಾಲೆಗಳಲ್ಲಿ ಕೊರತೆ ಇರುವ ಶಿಕ್ಷಕರ ಸಂಖ್ಯೆ ಎಷ್ಟು ? (ತಾಲೂಕುವಾರು ಹಾಗೂ ಶಾಲಾವಾರು ವಿವರ ಒದಗಿಸುವುದು)

ಆ) ಹಾಗಿದ್ದಲ್ಲಿ, ಸದರಿ ಕೊರತೆಯನ್ನು ನಿವಾರಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು? ಹಾಗೂ ಯಾವಾಗ ಭರ್ತಿ ಮಾಡಲಾಗುವುದು?

ಡಾ॥ ಹೆಗ್ಗಪ್ಪ ಡಿ. ಲಮಾಣಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) 1. ಬಾದಾಮಿ - 116
2. ಬಾಗಲಕೋಟೆ - 78
3. ಹುನುಗುಂದ - 71

ಆ) ಖಾಲಿಯಿರುವ ಪ್ರಾಥಮಿಕ ಶಾಲಾ ಶಿಕ್ಷಕರ ಪೈಕಿ 1356 ಹುದ್ದೆಗಳನ್ನು ಭರ್ತಿ ಮಾಡಲಾಗುತ್ತಿದೆ. ಇನ್ನು 6812 ಹುದ್ದೆಗಳನ್ನು ವಿಶೇಷ ನಿಯಮಾವಳಿಯಲ್ಲಿ ತುಂಬಲು ಕ್ರಮ ಕೈಗೊಳ್ಳಲಾಗುತ್ತಿದೆ. ಈ ಖಾಲಿಯಿರುವ ಹುದ್ದೆಗಳ ಪೈಕಿ ಬಾದಾಮಿ, ಬಾಗಲಕೋಟೆ, ಹಾಗೂ ಹುನುಗುಂದ ತಾಲ್ಲೂಕಿನ ಮೇಲೆ ಹೇಳಿರುವ ಹುದ್ದೆಗಳೂ ಸೇರಿವೆ.

ಕ್ರಮ ಸಂಖ್ಯೆ	ಶಾಲೆಯ ವಿಳಾಸ	ಹೆಚ್ಚುವರಿಯಾಗಿ ಅವಶ್ಯವಿರುವ ಹುದ್ದೆಗಳ ಸಂಖ್ಯೆ
1)	ಹಿರಿಯ ಕ ಗಂ ಉಶಾ ಹಿರೇಮುಚ್ಚಳಗುಡ್ಡ	02
2)	ಮಾದರಿ ಶಾಲೆ, ಯಂಕಂಚಿ ಮನಿಸಾಗರ	01